ಶ್ರೀ ಕೊಂಡಜ್ಜಿ ಬಸಪ್ಪ.—The management itself is responsible.

ಶ್ರೀ ಜಿ. ರಾಮೇಗೌಡ.—ಈ ಸಹಕಾರ ಸಂಘದ ಸರ್ವ ಸದಸ್ಯರ ಸಮ್ಮೇಳನ ಕ್ರಮವಾಗಿ ವರ್ಷ ವರ್ಷ ನಡೆಯುತ್ತಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಅಮಲ್ಗಮೇಷನ್ ಆದಮೇಲೆ ಒಂದಾವರ್ತಿ ಮಾತ್ರ ನಡೆದಿದೆ, ಇತ್ತೀಚೆಗೆ ನಡೆದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಸಹಕಾರ ಸಂಘದ ಕೆಲಸ ನಡೆಯುತ್ತಿಲ್ಲ ಎಂದ ಮೇಲೆ ಅಲ್ಲಿ ಖರ್ಚಾಗತಕ್ಕ ಹಣವೆಲ್ಲಾ ಕೇವಲ ಆ ಶಿಬ್ಬಂದಿಯ ವೆಚ್ಚಕ್ಕೆ ತಾನೆ ?

ಶ್ರೀ ಜಿ. ರಾಮೇಗೌಡ.—ಜನರರ್‌ಬಾಡಿ ಮಾಟಿಂಗನ್ನು ಕರೆಯುವುದಕ್ಕೆ ಆಡಿಟ್ ರಿಪೋರ್ಟ್ ಇರಲೇಬೇಕೆಂಬ ನೇಮವಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ಜನರಲ್ ಬಾಡಿಯಲ್ಲಿ ಯಾವ ವರ್ಷದ ಕಡೇ ಆಡಿಟ್ಟಾಗಿರುತ್ತದೋ ಆ ರಿಪೋರ್ಟ್ ಇರಬೇಕು. ಅದಿಲ್ಲದಿದ್ದರೂ ಜನರಲ್ ಬಾಡಿಯಲ್ಲಿ ಬೇರೆಕಾರ್ಯಗಳನ್ನು ಟ್ರಾನ್ಸಾಕ್ಟ್ ಮಾಡುವುದಕ್ಕೆ ಅವಕಾಶವಿದೆ.

Misappropriation in Avare Male Service Co-operative Society, Kanakapura Taluk.

*Q.—454. Sri K. L. SHIVALINGE GOWDA (Virupakshipura).—

Will the Government be pleased to state :—

(*a*) whether any amount has been misappropriated in Avare Male Service Co-operative Society, Maralavadi Hobli, Kanakapura Taluk, and if so, how much ;

(*b*) whether any fraudulent entries have been noticed in the bills pertaining to the transaction of the Society.

(*c*) the action taken by them regarding the recovery of the amount misappropriated ?

A.—Sri KONDAJJI BASAPPA (Deputy Minister for Co-operation).—

(*a*) Yes. Rs. 1,274-45 p.

(*b*) Yes.

(*c*) Arbitration case filed against the Secretary.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈ ಸಂಘದ ಕೆಲಸ ಕಾರ್ಯಗಳನ್ನು ನಡಸತಕ್ಕ ಎಲ್ಲಾ ಅಧಿಕಾರಗಳನ್ನೂ ಅಧ್ಯಕ್ಷರೇ ಹೊಂದಿದ್ದಾರೆಂಬ ಸಂಗತಿ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರೊಬ್ಬರೇ ಅಲ್ಲ,ಅಲ್ಲಿ ಸೆಕ್ರೆಟರಿಗಳಾಗಿರತಕ್ಕವರೂ ಕೂ ಅಧ್ಯಕ್ಷರ ಪರವಾಗಿ ಕೆಲಸಮಾಡತಕ್ಕ ಅಧಿಕಾರವನ್ನು ಪಡೆದಿರುತ್ತಾರೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಆ ಜನರಲ್ ಬಾಡಿಯವರಿಂದ ಅದರಲ್ಲಿ ನಡೆಯತಕ್ಕ ಎಲ್ಲಾ ಕೆಲಸ ಕಾರ್ಯಗಳ ಅಧಿಕಾರವನ್ನೂ ಅಧ್ಯಕ್ಷರೇ ಪಡೆದುಕೊಂಡಿರುತ್ತಾರೆಂಬ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅಧ್ಯಕ್ಷರು ಪ್ರೊಸೀಡಿಂಗ್ಸ್ ನೆಡೆಸುವಾಗ ಪ್ರಿಸೈಡ್ ಮಾಡುತ್ತಾರೆ. He is equally responsible because he is the President of the Institution.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈ ಸಹಕಾರ ಸಂಘದ ಅಧ್ಯಕ್ಷರು ಯಾರು ?

ಅಧ್ಯಕ್ಷರು.—ಅವರ ಹೆಸರನ್ನು ಹೇಳಬೇಕಾಗಿಲ್ಲ.

ಶ್ರೀ ಬಿ. ಎಲ್. ಗೌಡ.—ಆ ಸಂಘದಲ್ಲಿ 1274-45 ಪೈ ದುರುಪಯೋಗವಾಗಿದೆ ಎಂದು ತಿಳಿದು ಬಂದಮೇಲೆ ಅದನ್ನು ವಸೂಲು ಮಾಡುವುದಕ್ಕೇನು ಕಾರ್ಯಕ್ರಮವನ್ನು ಸರ್ಕಾರ ಕೈಗೊಂಡಿದೆ ?

ಶ್ರೀ ಕೊಂಡಜ್ಜಿ ಬಸಪ್ಪ.—1962—63ರ ಆಡಿಟ್ ರಿಪೋರ್ಟಿನಲ್ಲಿ ಅಷ್ಟು ಹಣ ದುರುಪಯೋಗ ವಾಗಿದೆ ಎಂದು ವರದಿಯಾಗಿದೆ. ವಸೂಲಿಗೆ ಕ್ರಾರ್ಯಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಇತ್ತೀಚೆಗೆ ಸಹಕಾರ ಸಂಘಗಳಲ್ಲಿ ದುರುಪಯೋಗದ ಪ್ರಕರಣಗಳು ಜಾಸ್ತಿಯಾಗುತ್ತಿರುವುದರಿಂದ ಅವುಗಳನ್ನು ತಡೆಗಟ್ಟುವುದಕ್ಕೆ ಒಂದು ಸಮಿತಿ ಮಾಡಿ ಅದರ ಸಲಹೆಯ ಮೇಲೆ ಕಾರ್ಯಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಜನರಲ್ಲಾಗಿ ತಾವು ಹೇಳುತ್ತಿದ್ದೀರಿ. ಈ ರೀತಿಯ ಅಕ್ರಮಗಳು ನಡೆದಿಲ್ಲ. ಮ್ಯಾನೇಜ್‌ಮೆಂಟಿನವರು ಜವಾಬ್ದಾರರು. ಅವರು ಸ್ವಲ್ಪ ಜಾಗರೂಕತೆಯಿಂದಿದ್ದರೆ ಅವು ನಡೆಯುವುದಿಲ್ಲ. ಅವರು ತಮ್ಮ ಜವಾಬ್ದಾರಿಯನ್ನು ಬಿಟ್ಟು ಅದನ್ನು ಕೋ-ಆಪರೇಟೀವ್ ಇಲಾಖೆ ಯವರು ಮಾಡಬೇಕೆಂದು ಹೇಳುತ್ತಿದ್ದಾರೆ. ಮ್ಯಾನೇಜಿಂಗ್ ಕಮಿಟಿಯವರು ಇಂಥ ಅವ್ಯವಹಾರ ಮಾಡಬಾರದು ಎಂತ ತಿಳುವಳಿಕೆ ಹೇಳಿದರೆ ಅದರಲ್ಲಾ ನರಿಹೋಗುತ್ತದೆ. ಸರ್ಕಾರದವರು ಮಾಡ ತಕ್ಕದ್ದನ್ನು ಅವರು ಮಾಡುತ್ತಾರೆ.

ಶ್ರೀ ಟಿ. ಮಾದೇಗೌಡ.—ದುರುಪಯೋಗ ನಡೆದು ಬಹಳ ದಿನಗಳಾದರೂ ಇದು ಇಲ್ಲಿಯತನಕ ಇತ್ಯರ್ಥವಾಗದಿರುವುದಕ್ಕೆ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ಆರ್ಬಿಟ್ರೇಷನ್ ಕೇಸನ್ನು ಹಾಕಿದ್ದೇವೆ. So far as the prosecution is concerned, they are holding enquiry into the matter.

ಶ್ರೀ ಕೆ. ಲಕ್ಕಪ್ಪ.—ಸಹಕಾರ ಸಂಘಗಳು ಬಹಳ ಚನ್ನಾಗಿ ಕೆಲಸ ಕಾರ್ಯಗಳನ್ನು ನಡೆ ಸುತ್ತಿವೆ ಎಂಬುದಾಗಿ ಹೇಳಿದರು, ಆದರೆ ಇತ್ತೀಚೆಗೆ ದುರುಪಯೋಗದ ಕೇಸುಗಳು ಹೆಚ್ಚಾಗು ತ್ತಿರುವುದರಿಂದ ಈ ಸಹಕಾರ ನೀತಿ ನಮ್ಮಲ್ಲಿ ವಿಫಲವಾಗಿಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.— ಹಾಗೆ ದುರುಪಯೋಗವಾಗತಕ್ಕ ನಿದರ್ಶನಗಳು ಅಪರೂಪ. ಅಂಥಾವು ನಡೆದಾಗ ಅವುಗಳ ಬಗ್ಗೆ ಕೂಡಲೇ ಕಾರ್ಯಕ್ರಮ ಕೈಗೊಂಡಿದ್ದೇವೆ. ಆರ್ಬಿಟ್ರೇಷನ್ ಕೇಸು ಗಳನ್ನು ಹಾಕಿದ್ದೇವೆ. ಅನೇಕ ಕೇಸುಗಳಲ್ಲಿ ಹಣವನ್ನು ವಸೂಲ್ಮಾಡಿದ್ದಾರೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈಗ ದುರುಪಯೋಗವಾಗಿರತಕ್ಕ ಹಣವನ್ನು ಜಾಗ್ರತೆ ವಸೂಲ್ಮಾಡತಕ್ಕ ಭರವಸೆಯನ್ನು ಕೊಡುತ್ತಾರೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದನ್ನು ರಿಕವರೀ ಮಾಡುವುದಕ್ಕೆ ಆದಷ್ಟು ಬೇಗ ಪ್ರಯತ್ನ ಮಾಡುತ್ತೇವೆ.

Bringing of more extent of Land under the Right Bank Canal of Bhadra Project in Lakkavalli Hobli.

*Q.—481. Sri T. R. PARAMESHWARAIAH (Tarikere).—

Will the Government be pleased to state :—

(*a*) whether any survey was conducted to bring more extent of land in Survey No. 4 of Arsikere in Lakkavalli hobli under the Right Bank Channel of Bhadra Project ;

(*b*) if so, what is the estimated cost for the same ;

(*c*) why there has been much delay in taking up the work early ?

A.—Sri S. NIJALINGAPPA (Chief Minister).—

(*a*) No.

(*b*) and (*c*) Does not arise in view of reply to clause (*a*).

Sri T. R. PARAMESWARIAH.—Is it a fact that the lands were granted to political sufferers and landless persons ?

Sri S. NIJALINGAPPA.—Some lands have been given to landless people and some political sufferers.